**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಸ್ಪೆಷಲ್ ಕೇಸ್ ಸಂಖ್ಯೆ– 299/2020**

| | | |
|---|---|---|
| **ಸಾಕ್ಷಿದಾರನ ಹೆಸರು** | : ಆರ್ ಮಂಜುನಾಥ್ | **ಪಿ.ಡಬ್ಲ್ಯೂ**– 7 |
| **ತಂದೆಯ ಹೆಸರು** | : ಲೇಟ್ ಎ. ರಾಜಣ್ಣ | **ಸಿ.ಡಬ್ಲ್ಯೂ**– 23 |
| **ವಯಸ್ಸು** | : 61 ವರ್ಷ | |
| **ಉದ್ಯೋಗ** | : ನಿವೃತ್ತ ಎಸಿಪಿ | |
| **ವಾಸಸ್ಥಳ** | : ಬೆಂಗಳೂರು. | |

**ಸಾಕ್ಷಿಯನ್ನು ಈ ದಿನ ದಿಃ08.04.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2019 ರಿಂದ ದಿಃ–05.07.2020 ರವರೆಗೆ ಮಂಡ್ಯ ಎಸಿಪಿ ಪೊಲೀಸ್ ಠಾಣೆಯಲ್ಲಿ ಡಿವೈಎಸ್.ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಏಪ್ರಿಲ್ಃ–2019 ರಿಂದ ಜುಲೈಃ–2019 ರವರೆಗೆ ಮೈಸೂರು ಎಸಿಬಿ ಠಾಣೆಯಲ್ಲಿ ಡಿವೈಎಸ್.ಪಿ ಆಗಿ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಂಡಿರುತ್ತೇನೆ.

2. ದಿಃ– 03.05.2019 ರಂದು ಶ್ರೀಮತಿ ಅಂಬಿಕಾ ಕೋಂ ಮಹದೇವಸ್ವಾಮಿ ಎಂಬುವವರು ಠಾಣೆಗೆ ಹಾಜರಾಗಿ ಟೈಪ್ ಮಾಡಿದ ಪಿರ್ಯಾದನ್ನು ನೀಡಿದ್ದು, ಅದರಂತೆ ನಂಜನಗೂಡು ತಾಲ್ಲೂಕು, ಕರ್ಲಾಪುರ ಗ್ರಾಮದ ಸರ್ವೇ ನಂಬರ್ಃ–132/4 ರಲ್ಲಿ 20 ಗುಂಟೆ ಜಮೀನನ್ನು ಶ್ರೀಮತಿ ರಾಜಮ್ಮರವರಿಂದ ಕ್ರಯ ಮಾಡಿಸಿಕೊಂಡಿದ್ದೆ. ಈ ಸಂಬಂಧ ಖಾತೆ ವರ್ಗಾವಣೆಗಾಗಿ ಕರ್ಲಾಪುರ ಗ್ರಾಮ

ಲೆಕ್ಕಾಧಿಕಾರಿ ಮಣಿಕಂಠ ಮತ್ತು ಗ್ರಾಮ ಸಹಾಯಕ ಪಾಪಣ್ಣರವರು ವರ್ಗಾವಣೆ ಮಾಡಿಕೊಡಲು 8,000 ರೂ. ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ– 3/2019 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿರೋದ ಕಾಯಿದೆ ಅಡಿ ಪ್ರಕರಣವನ್ನು ದಾಖಲಿಸಿ, ಅದರ ಜೊತೆಗೆ ದೂರುದಾರರು ಕ್ರಯಪತ್ರದ ಪ್ರತಿ ಮತ್ತು ಮೆಮೋರಿ ಚಿಪ್ ಅನ್ನು ನೀಡಿರುತ್ತಾರೆ.

**3.** ನಂತರ ಸದರಿ ದೂರನ್ನು ಮತ್ತು ಕ್ರಯಪತ್ರದ ಪ್ರತಿ ಮತ್ತು ಮೊಮೋರಿ ಚಿಪ್ ಅನ್ನು ಮುಚ್ಚಿದ ಲಕೋಟೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಅದನ್ನು ನಿಶಾನೆ ಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿ ಮತ್ತು ಹಿಂಬರಹವನ್ನು ನಿಶಾನೆ ಪಿ–1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದೃಡೀಕೃತ ಕ್ರಯಪತ್ರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–31( ಪುಟಸಂಖ್ಯೆ– 123 ರಿಂದ 130 ರವರೆಗೆ) ಎಂದು ಗುರುತಿಸಲಾಯಿತು.

**4.** ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–32 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–32(ಎ) ಎಂದು ಗುರುತಿಸಲಾಯಿತು. ಅದೇ ದಿನ ಈ ಪ್ರಕರಣದ ಮುಂದಿನ ತನಿಖೆಗೆ ಕಡತಗಳನ್ನು ಚಾ.ಸಾಃ24 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**5.** ಪ್ರಥಮ ವರ್ತಮಾನ ವರದಿಯಲ್ಲಿ ಕ್ರಮ ಸಂಖ್ಯೆ–3(**a**) ರಲ್ಲಿ ಈಗ್ಗೆ 6 ದಿನಗಳಿಂದ ಎಂದು ನಮೂದಿಸಿದ್ದು, ಅದರಲ್ಲಿ ನಿಖರವಾದ ಕೃತ್ಯ ನಡೆದ ದಿನಾಂಕ ನಮೂದಿಸಿರುವುದಿಲ್ಲ ಎಂದರೆ ಸರಿ.

**6.** ತಡವಾಗಿ ದೂರು ಸಲ್ಲಿಸಲು ಕಾರಣ ಏನೆಂದು ದೂರುದಾರರಿಂದ ವಿವರಣೆಯನ್ನು ಪಡೆದಿರುವುದಿಲ್ಲ. ದೂರನ್ನು ದೂರುದಾರರು ಎಲ್ಲಿ? ಮತ್ತು ಯಾರ ಕಡೆ ಟೈಪ್ ಮಾಡಿಸಿ ತಂದಿರುತ್ತಾರೆ ವಿಚಾರಿಸಿರುತ್ತೀರಿಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**7.** ದಿಃ– 03.05.2019 ರಂದು ಚಾ.ಸಾಃ1 ರವರು ನಮ್ಮ ಬಳಿ ಬಂದು ಖಾತೆ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಕಚೇರಿಯಲ್ಲಿ ಯಾರು ಇರುತ್ತಾರೆಂದು ವಿಚಾರಿಸಿದಾಗ, ದೂರುದಾರರು ಆರೋಪಿತರ ಹೆಸರುಗಳನ್ನು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ದೂರನ್ನು ನಮ್ಮ ಕಚೇರಿಯಲ್ಲಿ ಟೈಪ್ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ತಿಳಿಸಿರುವ ವಿಚಾರಗಳನ್ನು ಚಾ.ಸಾಃ1 ರವರು ನನಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

**8.** ಎಸಿಬಿ ಕಚೇರಿಯಲ್ಲಿ ನಾನು ಡಿಸಿಪಿ ಆಗಿದ್ದು, ಠಾಣಾಧಿಕಾರಿಯಾಗಿರುತ್ತೇನೆ ಎಂದರೆ ಸರಿ. ಠಾಣಾಧಿಕಾರಿ ಅಲ್ಲದ ಅಧಿಕಾರಿಯವರಿಗೆ ತನಿಖೆಯನ್ನು ವಹಿಸಿಕೊಡುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**